ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/696/ಗ್ರಾಪಂಕಾ/2012

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 21-12-2012.

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತಿ,
ಮೈಸೂರು ಜಿಲ್ಲೆ.

ಮಾನ್ಯರೆ,

ವಿಷಯ: ಗ್ರಾಮ ಪಂಚಾಯತ್ ಕಾರ್ಯದರ್ಶಿ, ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವೃಂದಕ್ಕೆ ಬಿಲ್‌ಕಲೆಕ್ಟರ್ ಇತ್ಯಾದಿ ವೃಂದದಿಂದ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಜಿಪಿಇ 18/2012-13 ದಿನಾಂಕ: 09-11-2012.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ತಮ್ಮ ಪತ್ರದಲ್ಲಿ ಕೋರಲಾದ ಅಂಶಗಳ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗಿದ್ದು, ಕಾನೂನು ಇಲಾಖೆಯು ನೀಡಿರುವ ಅಭಿಪ್ರಾಯ ಈ ಕೆಳಕಂಡಂತಿರುತ್ತದೆ:

"ಕರ್ನಾಟಕ ಪಂ.ರಾಜ್ ಅಧಿನಿಯಮ 1993 ರ ಕಲಂ 113ರನ್ವಯ, ಕಲಂ 111 ಮತ್ತು 112ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು ಗ್ರಾಮ ಪಂಚಾಯತಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಪೂರ್ವಾನುಮೋದನೆಯೊಂದಿಗೆ ಗ್ರಾಮ ಪಂಚಾಯ್ತಿಯ ಇತರ ನೌಕರರನ್ನು ನೇಮಕ ಮಾಡಿಕೊಳ್ಳಬಹುದು ಮತ್ತು ಗ್ರಾಮ ಪಂಚಾಯತಿ ನಿಧಿಯಿಂದ ಅವರ ಸಂಬಳಗಳನ್ನು ಸಂದಾಯ ಮಾಡಬಹುದು. ಪರಂತು ನೇಮಕಾತಿಗಳನ್ನು ಮಾಡುವಾಗ ನೇಮಕಾತಿ ಪ್ರಾಧಿಕಾರಿಯು, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇಮಕಾತಿಗೆ ಅನ್ವಯವಾಗುವಂತಹ ರೀತಿಯಲ್ಲಿಯೇ ಮತ್ತು ಅದೇ ಪ್ರಮಾಣದಲ್ಲಿಯೇ ಮೀಸಲಾತಿ ನಿಯಮಗಳನ್ನು ಅನುಸರಿಸಿ ನೇಮಕಾತಿಗಳನ್ನು ಮಾಡಬೇಕಾಗುತ್ತದೆ. ಗ್ರಾಮ ಪಂಚಾಯತಿಗಳಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಪೂರ್ವಾನುಮೋದನೆ ಪಡೆಯದೇ ನೇಮಕ ಮಾಡಿಕೊಳ್ಳುವ ಅಧಿಕಾರ ಇರುವುದಿಲ್ಲ. ಒಂದು ಪಕ್ಷ ಇಂತಹ ನೇಮಕಾತಿಗಳನ್ನು ಮಾಡಿದ್ದಲ್ಲಿ ಅದು ಕಾನೂನು ಬಾಹಿರ ನೇಮಕಾತಿಗಳಾಗುತ್ತದೆ. ಈ ಎಲ್ಲಾ ನೇಮಕಾತಿಗಳನ್ನು ಗ್ರಾಮ ಪಂಚಾಯತಿಗಳೂ ಸಹ ನೇಮಕಾತಿ ಕುರಿತು ಸಂವಿಧಾನದಲ್ಲಿ ಹೇಳಲಾದ ಪರಿಧಿಯಲ್ಲೇ ಮಾಡಬೇಕಾಗುತ್ತದೆ.

ಆಡಳಿತ ಇಲಾಖೆಯ ಕೋರಿರುವ ಸ್ಪಷ್ಟೀಕರಣವನ್ನು ಪರಿಶೀಲಿಸಲಾಗಿ, ಅದನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಉಮಾದೇವಿ ಪ್ರಕರಣದಲ್ಲಿ ನೀಡಿದ ತೀರ್ಪಿನ ತತ್ವಾಂಶಗಳ ಹಿನ್ನೆಲೆಯಲ್ಲಿ ಪರಿಗಣಿಸುವುದು ಅವಶ್ಯಕ ಎಂದು ಕಂಡುಬರುತ್ತದೆ. ಮಾನ್ಯ ಸರ್ವೋಚ್ಚ

ನ್ಯಾಯಾಲಯವು ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮತ್ತು ಇತರರು ವಿರುದ್ಧ ಉಮಾದೇವಿ ಹಾಗೂ ಇತರರು [2006(4)ಕೆ ಎಲ್ ಜೆ 29 ಎಸ್ ಸಿ], ಈ ಪ್ರಕರಣದಲ್ಲಿ ಈ ರೀತಿ ಹೇಳಿದೆ.

It is clear that adherence to the rule of equality in public employment is a basic feature of our Constitution and since the rule of law is the core of our Constitution, a court would certainly be disabled from passing an order upholding a violation of Article 14 or in ordering the overlooking of the need to comply with the requirements of Article 14 read with Article 16 of the Constitution. Therefore consistent with the scheme for public employment, this court while laying down the law, has necessarily to hold that unless the appointment is in terms of the relevant rules and after a proper competition among qualified persons, the same contractual appointment, the appointment comes to an end at the end of the contract, if it were an engagement of appointment on daily wages or casual basis, the same would come to an end when it is discontinued. Similarly, a temporay employee could not claim to be made permanent on the expiry of his term of appointment. It has also to be clarified that merly because a temporary employee or a casual wage worker is continued for a time beyond the term of his appointment, he would not be entitled to be absorbed in regular service or made permanent, merely on the strength of such continuance, if the original appointment was not made by following a due process of selection as envisaged by the relevant rules.

ತೀರ್ಪಿನ ಪ್ಯಾರ 10 ರಲ್ಲಿ ಹೀಗೆ ಹೇಳಲಾಗಿದೆ.

The States have made Acts, Rules and Regulations for implementing the above constitutional guarantees and any recruitment to the service in the State or in the Union is governed by such Acts, Rules and Regulations. The Constitution does not envisage any employment outside this constitutional scheme and without following the requirements set down therein.

ತೀರ್ಪಿನ ಪ್ಯಾರ 44 ರಲ್ಲಿ ಹೀಗೆ ಹೇಳಲಾಗಿದೆ.

One aspect needs to be clarified. There may be cases where irregular appointments (not illegal appointments) as explained in S.V. Narayanappa, R.N. Nanjundappa and B.N. Nagarajan, and referred to in paragraphs 15 avove, of duly qualified persons in duly sanctioned vacant posts might have been made and the employees have continued to work for 10 years or more but, without the intervention of orders of courts or of tribunals. The question of regularization of the services of such employees may have to be considered on merits in the light of the principles settled by this Court in the cases above referred to and in the light of this judgment. In that context, the Union of India, the State Government and their instrumentalities should take steps to regularize as a one time measure, the services of such irregularly appointed, who have worked for 10 years or more in duly sanctioned post, but not under cover of orders of courts or tribunals and should further ensure that regular recruitments are undertaken to fill those vacant sanctioned posts that required to be filled up, in cases where temporary employees or daily wagers are being now employed. The process must be set in

motion within six months from this date. We also clarify that regularization, if any already made, but not subjudice, need not be reopened based on this judgment, but there should be no further by-passing of the Constitutional requirement and regularizing or making permanent, those not duly appointed as per the Constitutional scheme.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಉಮಾದೇವಿ ಪ್ರಕರಣದಲ್ಲಿ ನೀಡಿದ ತೀರ್ಪಿನ ತತ್ವಾಂಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಪೂರ್ವಾನುಮೋದನೆ ಇಲ್ಲದೆ ಗ್ರಾಮ ಪಂಚಾಯತಿಗಳು ಮಾಡಿಕೊಂಡಿರುವ ನೇಮಕಾತಿಗಳು ಕಾನೂನುಬಾಹಿರ ನೇಮಕಾತಿಗಳು ಎಂಬ ಅಂಶ ಸ್ಪಷ್ಟವಾಗಿ ಕಂಡುಬರುತ್ತದೆ. ಆದುದರಿಂದ, ಈ ಹಂತದಲ್ಲಿ ಮೇಲೆ ಹೇಳಲಾದ ನೇಮಕಾತಿಗಳ ಕುರಿತು post facto ಅನುಮೋದನೆ ನೀಡುವುದೂ ಸಹ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗುತ್ತದೆ. ಆದುದರಿಂದ, ಜಿಲ್ಲಾ ಪಂಚಾಯತಿಯ -- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಪೂರ್ವಾನುಮೋದನೆ ಪಡೆಯದೇ ಗ್ರಾಮ ಪಂಚಾಯತಿಗಳು ಮಾಡಿಕೊಂಡಿರುವ ನೇಮಕಾತಿಗಳಿಗೆ ಅನುಮೋದನೆ ನೀಡಲು ಅವಕಾಶವಿರುವುದಿಲ್ಲವೆಂದು ಅಭಿಪ್ರಾಯಪಡಲಾಗಿದೆ".

ಕಾನೂನು ಇಲಾಖೆಯು ನೀಡಿರುವ ಮೇಲ್ಕಂಡ ಅಭಿಪ್ರಾಯದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿಗಳು ಕರ್ನಾಟಕ ಪಂ.ರಾಜ್ ಕಾಯ್ದೆ, 1993ರ ಪ್ರಕರಣ 113 ರಂತೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಪೂರ್ವಾನುಮತಿ ಪಡೆಯದೇ ಮಾಡಿಕೊಂಡಿರುವ ನೇಮಕಾತಿಗಳಿಗೆ ಈಗ ಅನುಮೋದನೆ ನೀಡಲು ಅವಕಾಶವಿರುವುದಿಲ್ಲವೆಂದು ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ನಿಮ್ಮ ನಂಬುಗೆಯ,

ಎಂ. ಲೀನಾ ನರೋನ್ಹ 21/12/12

(ಮಾರ್ಗರೇಟ್ ಲೀನಾ ನರೋನ್ಹ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

**ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,**
**ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.**

27-12-12

ಹೊರಡಿಸಿದೆ
ದಿನಾಂಕ 28/12
ಗ್ರಾ.ಅ.ಪಂ. ಇಲಾಖೆ

696